# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಪಿಎಸ್‌ಆರ್(4)730/2019-20

ಆಯುಕ್ತರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:15-10-2019.
30/10/19.

## ಸುತ್ತೋಲೆ

**ವಿಷಯ:-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯ ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸಿ ವರದಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ಮಾನ್ಯ ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಹೆಚ್.ಆರ್.ಸಿ.1079/10/31/2019 ನಿರ್ದೇಶನ ದಿನಾಂಕ:27-09-2019.

*********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬಹುತೇಕ ಎಲ್ಲ ರಸ್ತೆಗಳ ಬೀದಿದೀಪ/ವಿದ್ಯುತ್ ಸಂಪರ್ಕ ಕಂಬಗಳಿಗೆ, ರಸ್ತೆ ಬದಿಯ ಮರಗಳ ಮೂಲಕ ಅನಧಿಕೃತವಾಗಿ ಡಿ.ಟಿ.ಹೆಚ್/ಟೆಲಿವಿಷನ್ ಕೇಬಲ್‌ಗಳು, ದೂರವಾಣಿ, ಬ್ರಾಡ್‌ಬ್ಯಾಂಡ್ ಮುಂತಾದ ಕೇಬಲ್‌ಗಳನ್ನು ಅಕ್ರಮವಾಗಿ ಅಳವಡಿಸಿ ನಗರದ ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರು ಓಡಾಡಲು ಅಡಚಣೆಯಾಗುವುದಲ್ಲದೆ ನಗರದ ಸೌಂದರ್ಯಕ್ಕೆ ಧಕ್ಕೆಯಾಗಿರುತ್ತದೆ ಮತ್ತು ಸದರಿ ಕೇಬಲ್‌ಗಳಲ್ಲಿ ವಿದ್ಯುತ್ ಸಂಪರ್ಕಗೊಂಡು ಅವಘಡಗಳಿಗೆ ಕಾರಣವಾಗುತ್ತಿವೆ.

ಈ ಅಂಶವನ್ನು ಪರಿಗಣಿಸಿ ಈಗಾಗಲೇ ಮಾನ್ಯ ನ್ಯಾಯಾಲಯವು ಹಲವಾರು ಬಾರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಪ್ರಸ್ತುತ ಮಾನ್ಯ ಕರ್ನಾಟಕ ಮಾನವ ಹಕ್ಕುಗಳ ಆಯೋಗವು ಕೂಡ ಉಲ್ಲೇಖಿತ ಪ್ರಕರಣದಲ್ಲಿ ದಾಖಲಾದ ಪ್ರಕರಣದಲ್ಲಿ ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮುಂದಿನ ವಿಚಾರಣಾ ದಿನಾಂಕದೊಳಗಾಗಿ ಪಾಲಿಕೆಯಿಂದ ಪ್ರಸ್ತಾಪಿತ ಅನಧೀಕೃತ ಕೇಬಲ್‌ಗಳನ್ನು ತೆರವುಗೊಳಿಸಲು ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸಲು ನಿರ್ದೇಶಿಸಿರುತ್ತದೆ.

ಆದ್ದರಿಂದ ಕೂಡಲೇ ವಿಷಯದಲ್ಲಿ ಕೆಳಕಂಡಂತೆ ಕ್ರಮವಹಿಸಿ ದಿನಾಂಕ;10-10-2019 ರ ಒಳಗಾಗಿ ವರದಿಯನ್ನು ಕ್ರೋಢಿಕರಿಸಲು ಸಂಬಂಧಪಟ್ಟ ವಲಯದ ಜಂಟಿ ಆಯುಕ್ತರು/ಮುಖ್ಯ ಅಭಿಯಂತರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕೆಳಗಿನಂತೆ ಕ್ರಮವಹಿಸತಕ್ಕದ್ದು.

- ಆಯಾ ವಿಭಾಗ/ಉಪ ವಿಭಾಗದ ವಾರ್ಡ್ ಅಭಿಯಂತರರುಗಳು ಕೇಬಲ್ ಅಳವಡಿಸಲು ನೀಡಲಾದ ಪರವಾನಿಗೆ/M.O.U. ನಲ್ಲಿಯ ಷರತ್ತುಗಳ ಅಡಿಯಲ್ಲಿ ಅಳವಡಿಸಲಾಗಿದೆಯೇ? ಎಂಬುವುದನ್ನು ಖಚಿತಪಡಿಸಿಕೊಳ್ಳುವುದು.
- ವಲಯಗಳ ಮಟ್ಟದಲ್ಲಿ ಉಪವಿಭಾಗಗಳವಾರು ಎಲ್ಲ ಅನಧಿಕೃತ/ಅಧಿಕೃತ ಕೇಬಲ್‌ಗಳನ್ನು ಸರ್ವೆ ಮಾಡಿ ಗುರುತಿಸುವುದು ಮತ್ತು ಈ ಕ್ರಮದಿಂದ ಪಾಲಿಕೆಯ ಆಸ್ತಿ, ರಸ್ತೆ ಮತ್ತು ಚರಂಡಿ, ನಾಮಫಲಕಗಳು ಮುಂತಾದವುಗಳಿಗೆ ಹಾನಿಯಾಗಿದ್ದಲ್ಲಿ ಅಂತಹ ಕೇಬಲ್ ಮಾಲಿಕರ/ಸಂಸ್ಥೆಗಳ ವಿರುದ್ಧ ದಂಡ ವಿಧಿಸಿ ಕ್ರಮ ಕೈಗೊಳ್ಳತಕ್ಕದ್ದು.
- ಅನಧಿಕೃತ ಕೇಬಲ್‌ಗಳನ್ನು ತೆಗೆದುಹಾಕಲು (ತೆರವಿಗೆ) ದಿನಾಂಕ ನಿಗದಿಪಡಿಸಿ ತೆರವು ಕಾರ್ಯ ಕೈಗೊಳ್ಳುವುದು.

- ಅಧಿಕೃತವಾಗಿ ಕೇಬಲ್ ಅಳವಡಿಸಲು ಪರವಾನಿಗೆ ನೀಡಿದ್ದಲ್ಲಿ, ಪರವಾನಿಗೆಯ ಷರತ್ತುಗಳಂತೆ ಅಳವಡಿಸಲಾಗಿದೆಯೇ? ಮತ್ತು ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆಯೇ? ಎಂಬುದನ್ನು ಪರಿಶೀಲಿಸಿ, ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ, ಅಂತಹ ಪರವಾನಿಗೆಯನ್ನು ರದ್ದುಪಡಿಸಿ ಕೇಬಲ್‌ಗಳನ್ನು ತೆಗೆದುಹಾಕುವುದು.
- ರಸ್ತೆಗಳಲ್ಲಿ ಅಥವಾ ರಸ್ತೆಗೆ ಅಡ್ಡವಾಗಿ ಮತ್ತು ಪಾದಚಾರಿ ಮಾರ್ಗದಲ್ಲಿ ಕೇಬಲ್‌ನ್ನು ಅಳವಡಿಸಿದ್ದಲ್ಲಿ ಕೆ.ಎಂ.ಸಿ. ಕಾಯ್ದೆ ಕಲಂ 288(ಡಿ) ಅಡಿಯಲ್ಲಿ ಅನಧಿಕೃತ ಎಂದು ಪರಿಗಣಿಸಿ ತೆರವುಗೊಳಿಸುವುದು.
- ಕೇಬಲ್‌ಗಳ ತೆರವು ಕಾರ್ಯಾಚರಣೆಗೆ ಅವಶ್ಯವಿದ್ದಲ್ಲಿ ಸಂಬಂಧಪಟ್ಟ ಪೋಲಿಸ್ ಠಾಣೆಗೆ ಮನವಿ/ದೂರು ಸಲ್ಲಿಸಿ ಪೋಲಿಸ್ ಬಂದೋಬಸ್ತ್ ಪಡೆದುಕೊಳ್ಳತಕ್ಕದ್ದು ಮತ್ತು ಕಾರ್ಯಾಚರಣೆಗೆ ಸಂಬಂಧಪಟ್ಟಂತೆ ಛಾಯಾಚಿತ್ರ (ಫೋಟೋ) ತೆಗೆದಿಟ್ಟುಕೊಳ್ಳತಕ್ಕದ್ದು.

ಮೇಲ್ಕಂಡ ಕಾರ್ಯಾಚರಣೆಗೆ ಯಾವುದೇ ಅಡ್ಡಿ ಆತಂಕ ಅಥವಾ ತೊಂದರೆ ಇದ್ದಲ್ಲಿ ಆಯುಕ್ತರ ಗಮನಕ್ಕೆ ತಂದು, ಸೂಕ್ತ ಸೂಚನೆಯಂತೆ ಕಾರ್ಯನಿರ್ವಹಿಸತಕ್ಕದ್ದು.

ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸಲು ವಿಳಂಬಕ್ಕೆ ಅವಕಾಶ ನೀಡದೆ ಮೇಲ್ಕಂಡಂತೆ ಕ್ರಮವಹಿಸಿ ವಲಯವಾರು ತೆರವು ಕಾರ್ಯಾಚರಣೆಯ ವರದಿಯನ್ನು ದಿನಾಂಕ:25-10-2019 ರ ಒಳಗಾಗಿ ಆಯುಕ್ತರ ರವರ ಕಛೇರಿಗೆ ತಪ್ಪದೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ವರದಿ ಸಲ್ಲಿಸದೆ ಇರುವ ಲಯದ ಜಂಟಿ ಆಯುಕ್ತರನ್ನು ಮತ್ತು ಮುಖ್ಯ ಅಭಿಯಂತರರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ಈ ಮೂಲಕ ತಿಳಿಸಲಾಗಿದೆ.

ಆಯುಕ್ತರು 21/10/2019
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು:-

1. ಪೂಜ್ಯ ಮಹಾ ಪೌರರು ಹಾಗೂ ಉಪ ಮಹಾಪೌರರವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ವಿಶೇಷ ಆಯುಕ್ತರು (ಯೋಜನೆ)/ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ಅಪರ/ಜಂಟಿ ಆಯುಕ್ತರು (ಪಶ್ಚಿಮ /ದಕ್ಷಿಣ /ಪೂರ್ವ /ಯಲಹಂಕ /ದಾಸರಹಳ್ಳಿ /ಮಹದೇವಪುರ /ರಾಜರಾಜೇಶ್ವರಿನಗರ /ಬೊಮ್ಮನಹಳ್ಳಿ ವಲಯ) ರವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ಪ್ರಧಾನ ಅಭಿಯಂತರರು ಹಾಗೂ ಎಲ್ಲಾ ವಲಯದ ಮುಖ್ಯ ಅಭಿಯಂತರರಿಗೆ ಕಳುಹಿಸುತ್ತಾ ಅಧೀನ ಕಾರ್ಯಪಾಲಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ/ಕಿರಿಯ ಅಭಿಯಂತರರಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮವಹಿಸುವುದು.
5. ಮುಖ್ಯ ಅಭಿಯಂತರರು (ಓ.ಎಫ್.ಸಿ.) ರವರಿಗೆ ಸುತ್ತೋಲೆಯಂತೆ ಕ್ರಮವಹಿಸಿ ಮಾಹಿತಿಯನ್ನು ಕ್ರೂಢಿಕರಿಸಿ ಕಾಲಕಾಲಕ್ಕೆ ನ್ಯಾಯಾಲಯಕ್ಕೆ/ಕಾನೂನು ಕೋಶಕ್ಕೆ ಸಲ್ಲಿಸಲು ಸೂಚಿಸಿದೆ.
6. ಕಾನೂನು ಕೋಶದ ಮುಖ್ಯಸ್ಥರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7. ಕಛೇರಿ ಪ್ರತಿ.